INDIA NON JUDICIAL

सत्यमेव जयते

## Government of Karnataka

Rs. 500

e-Stamp

| | | |
|---|---|---|
| Certificate No. | : | IN-KA81356345180790X |
| Certificate Issued Date | : | 07-Jul-2025 03:44 PM |
| Account Reference | : | NONACC (FI)/ kacrsfl08/ MYSORE SOUTH8/ KA-MY |
| Unique Doc. Reference | : | SUBIN-KAKACRSFL08808027305105144X |
| Purchased by | : | CHAIRMAN NAMMA MYSORE FOUNDATION REG |
| Description of Document | : | Article 5(J) Agreement (in any other cases) |
| Property Description | : | M O U |
| Consideration Price (Rs.) | : | 0<br>(Zero) |
| First Party | : | PDO SIDDALINGAPURA GRAMA PANCHAYATHI MYSURU |
| Second Party | : | CHAIRMAN NAMMA MYSORE FOUNDATION REG |
| Stamp Duty Paid By | : | CHAIRMAN NAMMA MYSORE FOUNDATION REG |
| Stamp Duty Amount(Rs.) | : | 500<br>(Five Hundred only) |

IN-KA81356345180790X

RS. 500

Please write or type below this line

## ಒಡಂಬಡಿಕೆ (MOU)

ಸನ್ ಎರಡು ಸಾವಿರದ ಇಪ್ಪತ್ತೈದನೆ ಇಸವಿ ಜುಲೈ ಮಾಹೆ ತಾರೀಖು ಒಂಬತ್ತರಂದು (09-07-2025) ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಕಾರ್ಯಾಲಯ, ಸಿದ್ದಲಿಂಗಪುರ ಗ್ರಾಮ, ಮೈಸೂರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ (PDO) ರವರಿಂದ ಪ್ರತಿನಿಧಿಸಲ್ಪಡುತ್ತದೆ. (ಇನ್ನು ಮುಂದೆ ಇವರನ್ನು ಒಂದನೇ ಪಾರ್ಟಿ ಎಂದು ಸಂಭೋದಿಸಲಾಗುತ್ತದೆ)

ಹಾಗೂ

ನಮ್ಮ ಮೈಸೂರು ಫೌಂಡೇಶನ್ (ರಿ). ನಂ 1255, ಕೃಷ್ಣರಾಜ ರಸ್ತೆ, 2ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು, ಕರ್ನಾಟಕ, ಇದು ಇಂಡಿಯನ್ನ ಟ್ರಸ್ಟ್ ಆಕ್ಟ್ ಅಡಿಯಲ್ಲಿ ನೊಂದಾಯಿತವಾಗಿರುವ ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಇದರ ಅಧ್ಯಕ್ಷರಾದ ಶ್ರೀ ದಶರಥ್.ಕೆ ರವರಿಂದ ಪ್ರತಿನಿಧಿಸಲ್ಪಡುತ್ತದೆ. (ಇನ್ನು ಮುಂದೆ ಇವರನ್ನು ಎರಡನೇ ಪಾರ್ಟಿ ಎಂದು ಸಂಭೋದಿಸಲಾಗುತ್ತದೆ)

| | | |
|---|---|---|
| ಅಧ್ಯಕ್ಷರು<br>ನಮ್ಮ ಮೈಸೂರು ಫೌಂಡೇಷನ್ (ರಿ)<br>ಮೈಸೂರು | C. Maddra<br>ಅಧ್ಯಕ್ಷರು<br>ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ<br>ಮೈಸೂರು | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ<br>ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ<br>ಮೈಸೂರು |

Statutory Alert:
1. The authenticity of this Stamp certificate should be verified at 'www.shcilestamp.com' or using e-Stamp Mobile App of Stock Holding. Any discrepancy in the details on this Certificate and as available on the website / Mobile App renders it invalid.
2. The onus of checking the legitimacy is on the users of the certificate.
3. In case of any discrepancy please inform the Competent Authority.

ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ವತಿಯಿಂದ ನಮ್ಮ ಮೈಸೂರು ಫೌಂಡೇಶನ್(ರಿ) ಸಂಸ್ಥೆಗೆ ಒಣ /ಹಸಿ ತ್ಯಾಜ್ಯ ವಿಂಗಡಣೆ ಮಾಡಲು ಈ ಕೆಳಕಂಡ ಸೌಲಭ್ಯ ಹಾಗೂ ಷರತ್ತುಗಳನ್ನು ಒಂದನೇ ಪಾರ್ಟಿ ಒಪ್ಪಿರುತ್ತಾರೆ.

1. ಒಣ ತ್ಯಾಜ್ಯ ವಿಂಗಡಣೆ ಹಾಗೂ ವಿಲೇವಾರಿ ಮಾಡಲು ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಲಭ್ಯವಿರುವ ಉತ್ತಮ ಸ್ಥಿತಿಯಲ್ಲಿರುವ ತ್ಯಾಜ್ಯ ನಿರ್ವಹಣಾ ಘಟಕವನ್ನು ಹಸ್ತಾಂತರಿಸಿ ಕೊಡಲಾಗುವುದು.
2. ನೈರ್ಮಲ್ಯ/ಆರ್.ಡಿ.ಎಫ್ ಮತ್ತು ಬಯೋ ಮೆಡಿಕಲ್ ತ್ಯಾಜ್ಯಗಳ ವಿಲೇವಾರಿಯನ್ನು ತ್ಯಾಜ್ಯದ ವಿಲೇವಾರಿಯನ್ನು ತಮ್ಮ ಪಂಚಾಯಿತಿಯಿಂದಲೇ ನಿರ್ವಹಿಸುತ್ತೇವೆ.
3. ಘಟಕಕ್ಕೆ 24 ಗಂಟೆಗಳ ಕಾಲ
    a) ನೀರಿನ ಸೌಲಭ್ಯವನ್ನು ಒದಗಿಸುತ್ತೇವೆ.
    b) ಬೀದಿ ದೀಪಗಳ ಸೌಲಭ್ಯ ಒದಗಿಸುತ್ತೇವೆ.
    c) ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳು ಹಾಗೂ ಬೀದಿ ವ್ಯಾಪಾರಿಗಳಿಗೆ ಒಣತ್ಯಾಜ್ಯ ಮತ್ತು ಹಸಿ ತ್ಯಾಜ್ಯವನ್ನು ಬೇರ್ಪಡಿಸಿರುವಂತಹ ತ್ಯಾಜ್ಯವನ್ನು ನಮ್ಮ ಮೈಸೂರು ಫೌಂಡೇಶನ್(ರಿ) ಸಂಸ್ಥೆಗೆ ನೀಡುತ್ತೇವೆ.
    d) ತಮ್ಮ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಸಿಬ್ಬಂದಿಗಳು ಸೌಹಾರ್ದಯುತವಾಗಿ ಮತ್ತು ಸಾರ್ವಜನಿಕರಿಗೆ ಉತ್ತಮ ರೀತಿಯಲ್ಲಿ ಸೇವೆ ನೀಡುವ ದೃಷ್ಟಿಯಿಂದ ನಮ್ಮ ಮೈಸೂರು ಫೌಂಡೇಶನ್(ರಿ) ಸಿಬ್ಬಂದಿಗಳೊಂದಿಗೆ ಕೈ ಜೋಡಿಸಿ ಈ ಕಾರ್ಯವನ್ನು ಯಶಸ್ವಿಗೊಳಿಸಲು ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ತಮ್ಮ ವತಿಯಿಂದ ನಿರ್ದೇಶನಗಳನ್ನು ನೀಡಿದ್ದೇವೆ.
4. ಸಿಬ್ಬಂದಿಗಳಿಗೆ ಶೌಚಾಲಯ ಮತ್ತು ಮಲಗುವ ಕೊಠಡಿ ಸೌಲಭ್ಯ ಒದಗಿಸುತ್ತೇವೆ.
5. ಸದರಿ ಸಂಗ್ರಹಣಾಗಾರಕ್ಕೆ ಸಂಚರಿಸಲು ಉತ್ತಮ ರಸ್ತೆ ಮಾರ್ಗ ಹಾಗೂ ಮೂಲಭೂತ ಸೌಕರ್ಯವನ್ನು ಕಲ್ಪಿಸಲಾಗಿದೆ.
6. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ದಿನವಹಿ ಸಂಗ್ರಹಿಸುತ್ತಿರುವ ತ್ಯಾಜ್ಯವನ್ನು ಒಣ, ಹಸಿ, ನೈರ್ಮಲ್ಯ ಬೇರ್ಪಡಿಸಿಕೊಡಲು ತಮ್ಮ ಸಿಬ್ಬಂದಿಗೆ ಮಾರ್ಗದರ್ಶನವನ್ನು ನೀಡಿ ತೃಪ್ತಿಕರವಾದ ತ್ಯಾಜ್ಯವನ್ನು ಸಂಗ್ರಹಿಸಲು ನಿರ್ದೇಶಿಸುತ್ತೇವೆ.
7. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಮ್ಮ ಸಂಸ್ಥೆಯಿಂದ ತಮ್ಮ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಲಾಗುವುದು ಮತ್ತು ಸಾರ್ವಜನಿಕರಿಗೆ ಕರಪತ್ರದ ಮುಖಾಂತರ ಜಾಗೃತಿ ಮೂಡಿಸಲು ಕ್ರಮ ವಹಿಸಲಾಗುವುದು ಇದಕ್ಕೆ ತಾವು ಆದ್ಯತೆ ಮತ್ತು ಗಂಭೀರವಾಗಿ ಪರಿಗಣಿಸಬೇಕು.
8. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಸು ಪಾಸಿನಲ್ಲಿ ಸಾರ್ವಜನಿಕರಿಗೆ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲು ಸೂಚನ ಫಲಕಗಳನ್ನು ಅಳವಡಿಸಲು ನಮ್ಮ ಸಂಸ್ಥೆಯೊಂದಿಗೆ ತಮ್ಮ ಪಂಚಾಯಿತಿಯ ಅಧೀಕೃತ ಚಿಹ್ನೆ (ಲೋಗೋ)ವನ್ನು ಬಳಸಲು ಅನುಮತಿಯನ್ನು ನೀಡಲಾಗುವುದು.

ಅಧ್ಯಕ್ಷರು
ನಮ್ಮ ಮೈಸೂರು ಫೌಂಡೇಷನ್ (ರಿ)
ಮೈಸೂರು

9. ಸದರಿ ಸೇವೆಯನ್ನು ಕನಿಷ್ಠ 5 ವರ್ಷಗಳ ಕಾಲ ನಿರ್ವಹಿಸಲು ಗ್ರಾಮ ನಮ್ಮ ಪಂಚಾಯಿತಿ ಒಡಂಬಡಿಕೆ(MOU) ಮಾಡಲಾಗಿದ್ದು ಹಾಗೂ ಕಾಲಕ್ರಮೇಣ ಅವಶ್ಯಕತೆ ಇರುವ ಸಂದರ್ಭಗಳಲ್ಲಿ ಸದರಿ ಒಡಂಬಡಿಕೆಯನ್ನು ಮಾರ್ಪಾಡು ಮಾಡಲು ಅನುಮತಿ ನೀಡಲಾಗುವುದು.

10. ನಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಗ್ರಹಣೆಯಾದಂತಹ ಒಣ ತ್ಯಾಜ್ಯವನ್ನು ವಿಂಗಡಿಸಿದ ನಂತರ ಮರುಬಳಕೆ ಮಾಡುವಂತಹ ಸಂಸ್ಥೆಯಾದ ಮೆ//. ಜಾಗೃತ್ ಟೆಕ್ ಪ್ರೈ.ಲಿ. ಮೈಸೂರುರವರಿಗೆ ಸರಬರಾಜು ಮಾಡಲು ತಗಲುವ ಸಾಗಾಣಿಕೆ ವೆಚ್ಚ ಪ್ರತಿ ಟನ್‌ಗೆ ರೂ. 800 ರಂತೆ ಪಂಚಾಯಿತಿ ವತಿಯಿಂದಲೇ ಭರಿಸಲಾಗುವುದು.

11. CSR ಅನುದಾನಗಳು / ಕಂಪನಿಗಳ ಪ್ರಾಯೋಜಕರು ಹಾಗೂ ದಾನಿಗಳು ನಿಮ್ಮ ಸಂಸ್ಥೆಗೆ ಅನುದಾನ ನೀಡಲು ಮುಂದಾದಲ್ಲಿ ಇದಕ್ಕೆ ಗ್ರಾಮ ಪಂಚಾಯಿತಿ ಸಹಕರಿಸಬೇಕು ಹಾಗೂ ಇನ್ನಿತರೆ ಸಂಸ್ಥೆಗಳಿಗೆ ನಮ್ಮ ಸಂಸ್ಥೆಯನ್ನು ಶಿಫಾರಸ್ಸು ಮಾಡಿ ಇನ್ನೂ ಹೆಚ್ಚಿನ ನಾಗರೀಕ ಸೇವೆಯನ್ನು ನೀಡಲು ಅನುಮತಿಯನ್ನು ನೀಡಲಾಗುವುದು.

12. ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಣ / ಹಸಿ ತ್ಯಾಜ್ಯವನ್ನು ವಿಂಗಡಿಸಲು ಸಿಬ್ಬಂದಿಗಳಿಗೆ ಅವಶ್ಯವಿರುವ ಸಲಕರಣೆಗಳನ್ನು ವಿತರಿಸಲಾಗುವುದು.

13. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೇವೆ ನೀಡುತ್ತಿರುವ ಪೌರಕಾರ್ಮಿಕರ ಸಿಬ್ಬಂದಿಯ ಹೊಣೆಯನ್ನು ನಮ್ಮ ಮೈಸೂರು ಫೌಂಡೇಶನ್ ಸಂಸ್ಥೆಗೆ ಹಸ್ತಾಂತರಿಸಿ ಸದರಿ ಸಿಬ್ಬಂದಿಯ ಸೇವೆಯನ್ನು ಯಶಸ್ವಿಯಾಗಿ ಸ್ವಚ್ಛತೆಯ ಕಾರ್ಯ ನಿರ್ವಹಿಸಲು ಒಂದನೇ ಪಾರ್ಟಿ ಒಪ್ಪಿರುತ್ತಾರೆ.

ನಮ್ಮ ಮೈಸೂರು ಫೌಂಡೇಶನ್(ರಿ)ಯಿಂದ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಗೆ ನೀಡುವ ಈ ಕೆಳಕಂಡ ಸೌಲಭ್ಯ ಹಾಗೂ ಸೇವೆಯನ್ನು ಎರಡನೇ ಪಾರ್ಟಿ ಒಪ್ಪಿರುತ್ತಾರೆ.

1. ನಮ್ಮ ಸಂಸ್ಥೆಯಿಂದ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಣ/ ಹಸಿ ತ್ಯಾಜ್ಯವನ್ನು ವಿಂಗಡಿಸಲು 2 ಉಚಿತ ಸಿಬ್ಬಂದಿಗಳನ್ನು ನೇಮಿಸಿ ನಾಗರೀಕರಿಗೆ ಉತ್ತಮ ಸೇವೆ ನೀಡುವುದು.
2. ರಸ್ತೆ ಬದಿಯಲ್ಲಿ ತ್ಯಾಜ್ಯವನ್ನು ಹಾಕುವ ಸಾರ್ವಜನಿಕರಿಗೆ ನಮ್ಮ ಸಂಸ್ಥೆಯ ಸ್ವಯಂ ಸೇವಕರಿಂದ ಅರಿವು ಮೂಡಿಸುತ್ತಾ ಹಾಗೂ ದಂಡ ವಿಧಿಸಿ ಅದನ್ನು ಪಂಚಾಯಿತಿ ಖಾತೆಗೆ ಜಮೆ ಮಾಡಿಸಲು ಕ್ರಮ ಕೈಗೊಳ್ಳಲಾಗುವುದು.
3. ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮುಂದಿನ ದಿನಗಳಲ್ಲಿ ಉತ್ತಮ ಮತ್ತು ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಂಡು ಸಂಸ್ಥೆಯ ಕೌಶಲ್ಯ ಸಿಬ್ಬಂದಿಗಳನ್ನು ಒಳಗೊಂಡಂತೆ 12 ಗಂಟೆ ಒಣ/ ಹಸಿ ತ್ಯಾಜ್ಯವನ್ನು ವಿಂಗಡಿಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು
ನಮ್ಮ ಮೈಸೂರು ಫೌಂಡೇಷನ್ (ರಿ)
ಮೈಸೂರು

4. ನಮ್ಮ ಸಂಸ್ಥೆಯಿಂದ ಸದರಿ ಸ್ಥಳದಲ್ಲಿ ಒಣ ತ್ಯಾಜ್ಯವನ್ನು ವಿಂಗಡಣೆ ಮಾಡಿ ಇದನ್ನು ಮರುಬಳಕೆ ಮಾಡುವಂತಹ ಸಂಸ್ಥೆಗೆ ನೀಡಲಾಗುವುದು ಹಾಗೂ ಹಸಿ ತ್ಯಾಜ್ಯವನ್ನು ತಮ್ಮ ತ್ಯಾಜ್ಯ ನಿರ್ವಹಣಾ ಘಟಕದಲ್ಲೇ ನಮ್ಮ ಸಂಸ್ಥೆಯ ಸಿಬ್ಬಂದಿಗಳು ಹಾಗೂ ಪಂಚಾಯಿತಿ ಸಿಬ್ಬಂದಿಗಳೊಂದಿಗೆ ಜೊತೆಗೂಡಿ ಗೊಬ್ಬರವನ್ನಾಗಿ ಪರಿವರ್ತಿಸಲು ಕ್ರಮಕೈಗೊಳ್ಳಲಾಗುವುದು.
5. ಒಂದು ಪಕ್ಷದಲ್ಲಿ ನಮಗೆ ತೃಪ್ತಿಕರವಾಗದ ತ್ಯಾಜ್ಯವನ್ನು ನೀಡದೆ ಹೋದರೆ ಸದರಿ ಒಡಂಬಡಿಕೆ(MOU)ಯನ್ನು ರದ್ದು ಪಡಿಸಲು ಮೂರು ತಿಂಗಳ ಗಡುವು ನೀಡಿ ರದ್ದುಪಡಿಸಬೇಕು.

   ಅಂತಿಮವಾಗಿ ಈ ಮೇಲ್ಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ನಮ್ಮ ಸಂಸ್ಥೆಯಿಂದ ಒಣ/ ಹಸಿ ತ್ಯಾಜ್ಯದ ವಿಂಗಡಣೆ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಯನ್ನು ಒಂದು ದೊಡ್ಡ ಮೈಲುಗಲ್ಲಾಗಿ ಸಾಧನೆ ಮಾಡಿ ಇತರೆ ಪಂಚಾಯಿತಿಗಳಿಗೆ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಯನ್ನು ಮಾದರಿ ಮತ್ತು ರಾಯಭಾರಿಯನ್ನಾಗಿಸಲು ಸಂಪೂರ್ಣವಾಗಿ ಸಹಕರಿಸಲು ಬದ್ಧರಾಗಿರುತ್ತೇವೆ.

ಈ ಒಡಂಬಡಿಕೆಯನ್ನು ಕಾಲ ಕ್ರಮೇಣ ಅವಶ್ಯಕತೆ ಇರುವ ಸಂದರ್ಭಗಳಲ್ಲಿ ಮಾರ್ಪಾಡು ಮಾಡುವ ಷರತ್ತುಗಳಿಗೆ ಒಳಪಟ್ಟು ಈ ಕೆಳಕಂಡಂತಿರುವವರು ಒಪ್ಪಿ ದೃಢೀಕರಿಸಲಾಗಿರುತ್ತದೆ.

ಒಂದನೇ ಪಾರ್ಟಿಯವರು ಷರತ್ತುಗಳನ್ನು ಒಪ್ಪಿ ಈ ಕೆಳಗೆ ಸಹಿ ಮಾಡಿರುತ್ತೇವೆ.

C. Maddna

ಅಧ್ಯಕ್ಷ ಅಧ್ಯಕ್ಷರು
ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ
ಮೈಸೂರು ಮೈಸೂರು

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ
ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ
ಮೈಸೂರು
ಮೈಸೂರು

ಎರಡನೇ ಪಾರ್ಟಿಯವರು ಷರತ್ತುಗಳನ್ನು ಒಪ್ಪಿ ಈ ಕೆಳಗೆ ಸಹಿ ಮಾಡಿರುತ್ತೇವೆ.

ಅಧ್ಯಕ್ಷರು
ನಮ್ಮ ಮೈಸೂರು ಫೌಂಡೇಶನ್ (ರಿ)
ಮೈಸೂರು

ಸಾಕ್ಷಿಗಳು

1. BOPANNA. T. R.
#72, 6th MAIN, 3rd Block,
JAYALAKSHMIPURAM,
MYSORE- 570012

2.